REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 22 । 3 ಸೆಪ್ಟೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 49ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ




**ನವದೆಹಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 49ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ದಿನಾಂಕ : 29.08.2025ರಂದು ನವದೆಹಲಿಯ, ಎನ್‌ಸಿಯುಐ ಸಭಾಂಗಣದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಲಕ್ಷ್ಮಿ ದಾಸ್ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಸಭೆಯಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಲಕ್ಷ್ಮಿ ದಾಸ್ ರವರು ಹಾಗೂ ನ್ಯಾಫಕಬ್‌ನ ಪ್ರೆಸಿಡೆಂಟ್ ಎಮಿರೆಟಸ್ ರವರಾದ ಶ್ರೀ ಎಚ್.ಕೆ. ಪಾಟೀಲರು ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಯ ಕುರಿತು ಮಾತನಾಡಿದರು.

ಈ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ನ್ಯಾಫಕಬ್‌ನ ಉಪಾಧ್ಯಕ್ಷರುಗಳಾದ ಶ್ರೀ ಮುದಿತ್ ವರ್ಮಾ, ಸಿಎ ಮಿಲಿಂದ ಕಾಳೆ, ನಿರ್ದೇಶಕರುಗಳಾದ ಶ್ರೀ ಜ್ಯೋತೀಂದ್ರ ಎಂ. ಮೆಹ್ತಾ, ಶ್ರೀ ರಾಮ ಬಾಬು ಶಾಂಡಿಲ್ಯ, ಶ್ರೀ ಕೆ. ಜಯವರ್ಮಾ, ಶ್ರೀ ವೇಮಿರೆಡ್ಡಿ ನರಸಿಂಹ ರೆಡ್ಡಿ, ಸಿಎ ಅಜಯ ಬ್ರಹ್ಮೇಚ್, ಶ್ರೀ ಒ.ಪಿ. ಶರ್ಮಾ, ಶ್ರೀ ಎ.ಎಂ. ಹಿಂಡಸಗೇರಿ, ಶ್ರೀ ಗೌತಮಬಾಯಿ ಉಮಿಯಾಶಂಕರ್ ವ್ಯಾಸ್, ಶ್ರೀ ಕೆ.ಕಾಳಪ್ಪ, ಶ್ರೀಮತಿ ಅಲಕಾ ಶ್ರೀವಾಸ್ತವ, ಶ್ರೀ ಭಲಸನಿ ರಾಘವೇಂದ್ರ ರಾವ್, ಶ್ರೀ ಜ್ಞಾನಚಂದ ಲಕ್ಷ್ಮಣದಾಸಜಿ ಗಾರ್ಗ, ಶ್ರೀ ಕಂಜೀಬಾಯಿ ರಾಘವಬಾಯಿ ಬಲಾಲ್, ಶ್ರೀ ಕಾಂತಿಬಾಯಿ ಎಲ್. ಪಟೇಲ್, ಡಾ॥ ಉದಯ ವಿ. ಜೋಶಿ, ಶ್ರೀ ದಿಲೀಪ್ ಸಂಘಾನಿ, ಶ್ರೀ ಎನ್.ಎಸ್. ಜಯಕುಮಾರ್, ಶ್ರೀ ಮದನ ಗೋಪಾಲ ಸ್ವಾಮಿ, ಶ್ರೀ ಸುನಿಲ ಒ.ಪಿ. ದಿಯೋರಾ, ಶ್ರೀ ಮೋಹನ ಪರಶರ, ಶ್ರೀ ನರಣದಾಸ್ ವಿ.ಪಟೇಲ, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಯೋಗೇಶ್ ಶರ್ಮಾ ಉಪಸ್ಥಿತರಿದ್ದರು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.




4 ಎಂ.ಸಿ.ಸಿ. ಬ್ಯಾಂಕಿನ ಕುಲಶೇಖರ ಶಾಖೆ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮತ್ತು 11ನೇ ಎಟಿಎಮ್ ಉದ್ಘಾಟನೆ
6 ಹೊನ್ನಾವರ ಅರ್ಬನ್ ಬ್ಯಾಂಕ್ : 106ನೇ ವಾರ್ಷಿಕ ಮಹಾಸಭೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ನಮ್ಮಲ್ಲಿ ಜ್ಞಾನದ ಬೆಳಕನ್ನು ಮೂಡಿಸುವ ಗುರುಗಳ ನೆನೆಯೋಣ

ಬಾಲ್ಯದಲ್ಲಿ ಶಿಕ್ಷಣಕ್ಕೆ ಭದ್ರ ಭುನಾದಿ ಹಾಕಿ ಮಕ್ಕಳ ಮುಂದಿನ ಬದುಕನ್ನು ರೂಪಿಸುವಲ್ಲಿ ಶಿಕ್ಷಕರ ಜವಾಬ್ದಾರಿ ದೊಡ್ಡದು. ಪುಟ್ಟ ಮಗುವೊಂದು ಬೆಳೆದು ಮುಂದೆ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುವುದರ ಹಿಂದೆ ಶಿಕ್ಷಕರ ಪಾತ್ರವಿದೆ.

ಹೆತ್ತವರು ನಡೆ ಕಲಿಸಿದರೆ, ಗುರು ನುಡಿ ಕಲಿಸುತ್ತಾನೆ. ಯಾವುದೇ ವ್ಯಕ್ತಿಯ ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎಂದು ರಾಷ್ಟ್ರಕವಿ ಕುವೆಂಪು ಅವರು ಹೇಳುತ್ತಿದ್ದರು. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ದಾಸರೇ ಹಾಡಿದ್ದಾರೆ. ಜೀವನದಲ್ಲಿ ವಿದ್ಯೆ ಸಾಧಿಸಬೇಕಿದ್ದರೆ ಗುರುವಿನ ಗುಲಾಮನಾಗಬೇಕೆನ್ನುವುದು ಇದರರ್ಥ.

ಒಬ್ಬ ಗುರು ಸಾವಿರಾರು ವಿದ್ಯಾರ್ಥಿಗಳಿಗೆ ಜೀವನದ ದಾರಿ ತೋರಿಸುತ್ತಾನೆ. ಅನೇಕ ಖ್ಯಾತ ವ್ಯಕ್ತಿಗಳು ತಾವು ಈ ಮಟ್ಟಕ್ಕೇರಲು ತಮ್ಮ ಬದುಕು ರೂಪಿಸಿದ ಗುರುಗಳೇ ಕಾರಣವೆಂದು ಸ್ಮರಿಸುತ್ತಾರೆ. ನಮ್ಮ ರಾಷ್ಟ್ರಕವಿಗಳಾಗಿದ್ದ ಕುವೆಂಪುರವರು ತಮಗೆ ಕನ್ನಡ ಕಂಕಣ ಕಟ್ಟಿದವರು ಗುರುಗಳಾದ ಟಿ.ಎಸ್. ವೆಂಕಣ್ಣಯ್ಯ ಎಂದು ಅವರನ್ನು ಸದಾ ಸ್ಮರಿಸುತ್ತಿದ್ದರು. ಮಾತ್ರವಲ್ಲ ತಾವು ರಚಿಸಿದ ಮಹಾ ಕಾವ್ಯ ರಾಮಾಯಣ ದರ್ಶನವನ್ನು ವೆಂಕಣ್ಣಯ್ಯನವರ ಸ್ಮರಣೆಗೆ ಅರ್ಪಿಸಿದರು.

ಹಿಂದೆ ನಮ್ಮ ಸಾಹಿತ್ಯ, ಸಂಸ್ಕೃತಿ ರೂಪಿಸಿದವರಲ್ಲಿ ಅನೇಕರು ಶಿಕ್ಷಕರೇ ಆಗಿದ್ದರು. ಕಾವ್ಯಲೋಕದ ಗಾರುಡಿಗ ಎಂದೆ ಕರೆಸಿಕೊಳ್ಳುತ್ತಿದ್ದ ದ.ರಾ. ಬೇಂದ್ರೆ, ಡಿ.ಎಲ್. ನರಸಿಂಹಾಚಾರ್, ತಿ.ನಂ. ಶ್ರೀಕಂಠಯ್ಯ, ನವೋದಯದ ಕಣ್ವರೆಂದೆ ಖ್ಯಾತರಾದ ಬಿ.ಎಂ. ಶ್ರೀಕಂಠಯ್ಯ, ಮಕ್ಕಳ ಕವಿ ಜಿ.ಪಿ. ರಾಜರತ್ನಂ, ವಿನಾಯಕ ಕೃಷ್ಣ ಗೋಕಾಕ್, ನವ್ಯ ಸಾಹಿತ್ಯದ ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ಚನ್ನವೀರ ಕಣವಿ, ಚಂದ್ರಶೇಖರ ಪಾಟೀಲ, ಪಿ.ಲಂಕೇಶ್ ಹೀಗೆ ಇನ್ನೂ ಅನೇಕ ಮಹನೀಯರು ಶಿಕ್ಷಕರಾಗಿ ಈ ನಾಡಿನ ಅಸಂಖ್ಯಾತ ವಿದ್ಯಾರ್ಥಿಗಳ ಬದುಕು ರೂಪಿಸಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ.

ಅಷ್ಟೇಕೆ ನಮ್ಮ ದೇಶದ ಎರಡನೇ ರಾಷ್ಟ್ರಪತಿಯಾಗಿ ಪೀಠವನ್ನು ಅಲಂಕರಿಸಿದ ಮಹಾನ್ ವ್ಯಕ್ತಿ ಡಾ. ರಾಧಾಕೃಷ್ಣನ್ ಅವರೂ ಶಿಕ್ಷಕರಾಗಿದ್ದವರೆ. ತಮ್ಮ ವಿದ್ವತ್‌ನ ಕಾರಣಕ್ಕೆ ಕಲ್ಕತ್ತಾದ ವಿಶ್ವವಿದ್ಯಾಲಯದಲ್ಲಿ ನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಭೋಧಕರಾಗಿದ್ದರು. ಅದಕ್ಕೂ ಮುನ್ನ ಅವರು ಇಂಗ್ಲೆಂಡ್‌ನ ಆಕ್ಸ್‌ಫರ್ಡ್‌ನಲ್ಲಿಯೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ತತ್ವಶಾಸ್ತ್ರ ಪಾರಂಗತರಾಗಿದ್ದ ಡಾ.ರಾಧಾಕೃಷ್ಣನ್ ತಮ್ಮ ಮೇಲೆ ಅತ್ಯಂತ ಪ್ರಭಾವ ಬೀರಿದ್ದ ರವೀಂದ್ರನಾಥ ಟ್ಯಾಗೋರರ ಕುರಿತು ತತ್ವಶಾಸ್ತ್ರ ಕೃತಿ ರಚನೆ ಮಾಡಿದರು.

ಶ್ರೇಷ್ಠ ದಾರ್ಶನಿಕರಾಗಿದ್ದ ಡಾ. ರಾಧಾಕೃಷ್ಣನ್ ನಮ್ಮ ದೇಶದ ಸಂಸ್ಕೃತಿ–ಪರಂಪರೆಯನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇಂಥಹ ಮಹಾನ್ ವ್ಯಕ್ತಿಯ ಜನ್ಮ ದಿನ ಆಚರಿಸಲು ಅವರ ಒಪ್ಪಿಗೆ ಪಡೆಯಲು ಹೋದವರಿಗೆ ಅವರು ಹೇಳಿದ್ದು; ಖಂಡಿತ ಬೇಡ, ಬದಲಿಗೆ ನಮ್ಮಲ್ಲಿ ಜ್ಞಾನದ ಬೆಳಕನ್ನು ಮೂಡಿಸುವ ಶಿಕ್ಷಕರ ದಿನವನ್ನಾಗಿ ಆಚರಿಸಿ ಎಂದು.

ದೊಡ್ಡವರ ಆಲೋಚನೆಗಳು ದೊಡ್ಡದಾಗಿಯೇ ಇರುತ್ತವೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದಂದು, ನಮ್ಮ ಬದುಕು ರೂಪಿಸುವ ಗುರುಗಳ ನೆನೆಯೋಣ, ಧನ್ಯವಾದ ಅರ್ಪಿಸೋಣ, ಅವರ ಕೊಡುಗೆಯನ್ನು ಸ್ಮರಿಸೋಣ ಬನ್ನಿ.

▸▸ ಎಚ್.ಕೆ. ಪಾಟೀಲ

## ಮೊದಲ ಬಾರಿಗೆ ಬ್ಯಾಂಕಿನಿಂದ ಸಾಲ ಪಡೆಯುವವರು ಕನಿಷ್ಠ ಸಿಬಿಲ್ ಸ್ಕೋರ್ ಇಲ್ಲದೆಯೂ ಬ್ಯಾಂಕ್ ಸಾಲ ಪಡೆಯಬಹುದು: ಹಣಕಾಸು ಸಚಿವಾಲಯ

**ಹೊಸದಿಲ್ಲಿ:** ಕನಿಷ್ಠ ಸಿಬಿಲ್ ಸ್ಕೋರ್ ಇಲ್ಲ ಎಂಬ ಒಂದೇ ಕಾರಣಕ್ಕೆ ಮೊದಲ ಬಾರಿಗೆ ಅರ್ಜಿ ಹಾಕಿದವರಿಗೆ ಬ್ಯಾಂಕ್‌ಗಳು ಸಾಲ ನಿರಾಕರಿಸುವಂತಿಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ಸಂಸತ್ ಅಧಿವೇಶನದ ಸಂದರ್ಭದಲ್ಲಿ ಲೋಕಸಭೆಯಲ್ಲಿ ಈ ಬಗ್ಗೆ ಉತ್ತರ ನೀಡಿರುವ ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ, ಹೊಸ ಸಾಲಗಾರರ ಅರ್ಜಿಗಳನ್ನು ಹಿಂದಿನ ಸಾಲ ಇತಿಹಾಸವಿಲ್ಲ ಎಂಬ ಕಾರಣಕ್ಕೆ ತಿರಸ್ಕರಿಸುವಂತಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಈಗಾಗಲೇ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸೂಚನೆ ನೀಡಿದೆ ಎಂದು ಮಾಹಿತಿ ನೀಡಿದರು.




ಕನಿಷ್ಠ ಸಿಬಿಲ್ ಸ್ಕೋರ್ ಇಂತಿಷ್ಟೇ ಇರಬೇಕು ಎಂದು ಆರ್‌ಬಿಐ ನಿಗದಿಗೊಳಿಸಿಲ್ಲ. ಸಾಲ ನೀಡುವ ಹಣಕಾಸು ಸಂಸ್ಥೆಗಳು ಅನುಮೋದಿತ ನೀತಿಗಳು ಮತ್ತು ಮಾರ್ಗಸೂಚಿಗಳ ಆಧಾರದ ಮೇಲೆ ತಮ್ಮ ನಿರ್ಧಾರ ತೆಗೆದುಕೊಳ್ಳುತ್ತವೆ. ಕ್ರೆಡಿಟ್ ಮಾಹಿತಿ ವರದಿಯು ಹಲವಾರು ಅಂಶಗಳಲ್ಲಿ ಒಂದು ಅಂಶ ಮಾತ್ರ ಎಂದು ಚೌಧರಿ ವಿವರಿಸಿದರು.

**ಅಡಮಾನ ಸಾಲದ ನಿಯಮ ಸಡಿಲಗೊಳಿಸಿದ ಕೇಂದ್ರ :** ಭಾರತೀಯ ರಿಸರ್ವ್ ಬ್ಯಾಂಕ್ ಚಿನ್ನದ ಸಾಲದ ನಿಯಮಗಳಲ್ಲಿ ಬದಲಾವಣೆಗಳನ್ನು ಘೋಷಿಸಿದ್ದು, ಹೊಸ ನಿಯಮಗಳು 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿವೆ. ಇದರ ಅನ್ವಯ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಚಿನ್ನದ ಮೌಲ್ಯದ ಶೇ. 85ರಷ್ಟು ಸಾಲ ನೀಡಲು ಅನುಮತಿಸಲಾಗಿದೆ. ಸಾಲದ ಮಿತಿ ರೂ. 2.5 ಲಕ್ಷಕ್ಕಿಂತ ಕಡಿಮೆ ಇದ್ದರೆ, ಕ್ರೆಡಿಟ್ ಸ್ಕೋರ್ ಪರಿಶೀಲಿಸುವ ಅಗತ್ಯವಿಲ್ಲ. ಅಲ್ಲದೆ, ಸಾಲ ತೀರಿಸಿದ ದಿನವೇ ಆಭರಣಗಳನ್ನು ಹಿಂತಿರುಗಿಸಬೇಕು. ವಿಳಂಬವಾದರೆ ದಿನಕ್ಕೆ ರೂ. 5,000 ದಂಡ ವಿಧಿಸಲಾಗುವುದು.

# ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕ್ ವಾರ್ಷಿಕ ಸಾಮಾನ್ಯ ಮಹಾಸಭೆ 2024-2025ನೇ ಸಾಲಿನಲ್ಲಿ ರೂ. 5429.03 ಕೋಟಿ ವ್ಯವಹಾರ



**ಉಡುಪಿ:** ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ 113ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ಉಡುಪಿ ಕುಂಜಿಬೆಟ್ಟಿನಲ್ಲಿರುವ ಶಾರದಾ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಜರುಗಿತು.

ಬ್ಯಾಂಕಿನ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಅಧ್ಯಕ್ಷತೆ ವಹಿಸಿ ಸದಸ್ಯರನ್ನು ಸ್ವಾಗತಿಸಿ ಬ್ಯಾಂಕಿನ ಪ್ರಗತಿಯ ಬಗ್ಗೆ ಪ್ರಸ್ತಾವನೆಗೈದು ವರದಿ ವಾಚಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರು ಸಾಮಾನ್ಯ ಮಹಾಸಭೆಯ ನಡವಳಿಯನ್ನು ಮಂಡಿಸಿದರು.

ಬ್ಯಾಂಕಿನಲ್ಲಿ ಒಟ್ಟು 21,945 ಸದಸ್ಯರಿದ್ದು ಇವರಿಂದ ರೂ.11.71 ಕೋಟಿ ಪಾಲು ಬಂಡವಾಳ, ಬ್ಯಾಂಕಿನ ನಿಧಿ ಮತ್ತು ಮೀಸಲು ನಿಧಿಗಳಲ್ಲಿ ರೂ.24.20 ಕೋಟಿ ಇದ್ದು, ಸದಸ್ಯರು ಹಾಗೂ ಗ್ರಾಹಕರಿಂದ ರೂ. 331.48 ಕೋಟಿ ಠೇವಣಿ ಪಡೆಯಲಾಗಿದ್ದು, ರೂ.244.09 ಕೋಟಿ ಸಾಲ ಹೊರಬಾಕಿಯಿರುತ್ತದೆ. ದುಡಿಯುವ ಬಂಡವಾಳ ರೂ.371.38 ಕೋಟಿ ಇದ್ದು, ರಿಸರ್ವ್ ಬ್ಯಾಂಕಿನ ನಿಯಮಗಳಿಗನುಸಾರವಾಗಿ ಬ್ಯಾಂಕು ಬಂಡವಾಳ ಹೂಡಿಕೆ ಮಾಡುತ್ತಿದ್ದು ರೂ.77.71 ಕೋಟಿ ರಾಷ್ಟ್ರೀಯ ಭದ್ರತಾ ಪತ್ರ (Govt. of India Bond) ಹೂಡಿಕೆಯಾಗಿರುತ್ತದೆ.

ಲಾಭಗಳಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಪ್ರಗತಿ ಸಾಧಿಸಿದ್ದು ವರ್ಷಾಂತ್ಯಕ್ಕೆ ಕಾನೂನು ಬದ್ಧ ತೆರಿಗೆ ಪಾವತಿ ಪೂರ್ವದಲ್ಲಿ ರೂ.421.02ಲಕ್ಷ ಲಾಭ ಗಳಿಸಿ ಸನ್ನದು ಲೆಕ್ಕಪರಿಶೋಧಕರಿಂದ "ಎ" ಶ್ರೇಣಿ ಪಡೆದಿರುತ್ತದೆ. 2024-2025ರಲ್ಲಿ ರೂ.5429.03 ಕೋಟಿ ವ್ಯವಹಾರ ನಡೆಸಿದ್ದು, ವರ್ಷದಿಂದ ವರ್ಷಕ್ಕೆ ವ್ಯವಹಾರವು ವೃದ್ಧಿಯಾಗಿದ್ದು ಬ್ಯಾಂಕು ತನ್ನ ಸದಸ್ಯರಿಗೆ ಶೇ.10 ಡಿವಿಡೆಂಡ್ ಘೋಷಿಸಿರುತ್ತದೆ.

ಬ್ಯಾಂಕಿನ ಮಾಜಿ ನಿರ್ದೇಶಕರು ಹಾಗೂ ನಿರ್ಗಮಿತ ದೈನಿಕ ಠೇವಣಿ ಸಂಗ್ರಾಹಕರನ್ನು ಗೌರವಿಸಿ ಸನ್ಮಾನಿಸಲಾಯಿತು. ಉಡುಪಿ ಪರಿಸರದ ಬಡ ರೋಗಿಗಳಿಗೆ ಸಮಯವನ್ನು ಪರಿಗಣಿಸದೆ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದ "ಬಡವರ ಡಾಕ್ಟರ್" ಎಂದೇ ಜನಪ್ರಿಯರಾದ ಡಾ.ಜಯಂತ್ ಕುಮಾರ್‌ರವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಶಾಖಾವಾರು ಉತ್ತಮ ಗ್ರಾಹಕರನ್ನು ಗುರುತಿಸಿ 2024-2025ನೇ ಸಾಲಿನ ಶ್ರೇಷ್ಠ ಗ್ರಾಹಕ ಪ್ರಶಸ್ತಿಯನ್ನು ಹಾಗೂ 2024-2025ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಕಟಪಾಡಿ, ದೊಡ್ಡಣಗುಡ್ಡೆ ಹಾಗೂ ನಡ್ಸಾಲ್ ಶಾಖೆಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿಗಳನ್ನು ನೀಡಲಾಯಿತು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ.ರಾಘವೇಂದ್ರ ಭಟ್, ನಿರ್ದೇಶಕರಾದ ಶ್ರೀ ಪಿ.ಎನ್. ರವೀಂದ್ರ ರಾವ್, ಶ್ರೀಮತಿ ಮನೋರಮಾ ಎಸ್., ಶ್ರೀ ಕೆ. ಮುರಳೀಧರ ಭಟ್, ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಡಾ॥ ಪಡುಬಿದ್ರಿ ಶ್ರೀಪತಿ ರಾವ್, ಶ್ರೀ ಸೂರ್ಯಪ್ರಕಾಶ್ ರಾವ್ ಎನ್., ಶ್ರೀ ಭಾಸ್ಕರ ರಾವ್ ಕಿದಿಯೂರು, ಶ್ರೀ ಸೀತಾರಾಮ ಕೇಕುಡ, ಶ್ರೀ ಜಯಪ್ರಕಾಶ ಭಂಡಾರಿ, ಶ್ರೀ ದೇವದಾಸ್, ಶ್ರೀಮತಿ ರೂಪಾ ಮೋಹನ್ ಹಾಗೂ ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು.

ಶ್ರೀ ಚಂದ್ರಕಾಂತ್ ಆಚಾರ್ಯ ಹಾಗೂ ಸಾಲಿಗ್ರಾಮ ಶಾಖೆಯ ವ್ಯವಸ್ಥಾಪಕರಾದ ಶ್ರೀ ಕೆ. ಹರಿಪ್ರಸಾದ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಬ್ಯಾಂಕಿನ ಸಹಾಯಕ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎ. ರಾಘವೇಂದ್ರ ಹೆಬ್ಬಾರ್ ವಂದನಾರ್ಪಣೆ ಮಾಡಿದರು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು :** ಬೆಂಗಳೂರಿನ ದಿ ಕಂಟ್ರೋಲರ್ಸ್ ಆಫೀಸ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್ಕನ್ನು ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಲಕ್ಷ್ಮೀ ಎನ್. ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿ ಉಪಸ್ಥಿತರಿದ್ದರು.

# ಎಂ.ಸಿ.ಸಿ. ಬ್ಯಾಂಕಿನ ಕುಲಶೇಖರ ಶಾಖೆ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮತ್ತು 11ನೇ ಎಟಿಎಮ್ ಉದ್ಘಾಟನೆ

**ಮಂಗಳೂರು :** ತನ್ನ ಗೌರವಾನ್ವಿತ ಗ್ರಾಹಕರ ಅನುಕೂಲಕ್ಕಾಗಿ, ಎಂಸಿಸಿ ಬ್ಯಾಂಕಿನ ಕುಲಶೇಖರ ಶಾಖೆಯನ್ನು ಆಗಸ್ಟ್ 17, 2025 ರಂದು ಮಂಗಳೂರಿನ ಕಲ್ಪನೆಯಲ್ಲಿರುವ ಸ್ಪೆಕ್ಟ್ರಮ್ ಬಿಸಿನೆಸ್ ಸೆಂಟರ್‌ನ ಕೆಳ ಮಹಡಿಯಲ್ಲಿರುವ ಹೊಸದಾಗಿ ಖರೀದಿಸಿದ ಸ್ವಂತ ನಿವೇಶನಕ್ಕೆ ಸ್ಥಳಾಂತರಿಸಲಾಯಿತು. ಹೊಸ ಕಛೇರಿಯನ್ನು ಎಂಸಿಸಿ ಬ್ಯಾಂಕಿನ ಅಧ್ಯಕ್ಷ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ಉದ್ಘಾಟಿಸಿದರು.



ಕಾರ್ಯಕ್ರಮವನ್ನು ಮಂಗಳೂರಿನ ಬಿಕರ್ನಕಟ್ಟೆಯ ಇನ್ಫೆಂಟ್ ಜೀಸಸ್ ಶ್ರೈನ್‌ನ ನಿರ್ದೇಶಕ ವಂದನೀಯ ಸ್ಟಿಫನ್ ಪಿರೇರಾ, ಒಸಿಡಿ ಅವರು ದೀಪ ಬೆಳಗಿಸುವ ಮೂಲಕ ಪ್ರಾರಂಭಿಸಿದರು. ಕೊರ್ಡೆಲ್ ಹೋಲಿ ಕ್ರಾಸ್ ಚರ್ಚ್‌ನ ಧರ್ಮ ಗುರುಗಳಾದ ವಂದನೀಯ ಕ್ಲಿಫರ್ಡ್ ಫೆರ್ನಾಂಡಿಸ್ ಅವರು ಹೊಸ ಕಛೇರಿಯನ್ನು ಆಶೀರ್ವದಿಸಿದರು.

ಸೇಫ್ ರೂಮ್ ಅನ್ನು ಮುಖ್ಯಅತಿಥಿ, ಸಿಸ್ಟರ್ಸ್ ಆಫ್ ದಿ ಲಿಟಲ್ ಫ್ಲವರ್ ಆಫ್ ಬೆಥನಿಯ ಪ್ರೊಕ್ಯುರೇಟರ್ ಸಿ.ಫ್ಲೋಸಿ ಮಿನೆಜಸ್ ಉದ್ಘಾಟಿಸಿದರು. ಎಟಿಎಂ ಸೌಲಭ್ಯವನ್ನು ಮಂಗಳೂರಿನ ವೈಟ್ ಡವ್ಸ್‌ನ ಸ್ಥಾಪಕಿ ಮತ್ತು ಅಧ್ಯಕ್ಷೆ ಶ್ರೀಮತಿ ಕೊರಿನ್ ರಸ್ಕಿನ್ಹಾ ಉದ್ಘಾಟಿಸಿದರು.

ಮೊದಲ ಎಟಿಎಂ ನಗದು ಹಿಂಪಡೆಯುವಿಕೆಯನ್ನು ಮಂಗಳೂರಿನ ಪ್ರಸಾದ್ ಪ್ರಿಂಟರ್ಸ್‌ನ ಮಾಲೀಕ ಶ್ರೀ ಪ್ರವೀಣ್ ಪತ್ರಾವೊ ನೆರವೇರಿಸಿದರು. ನಿರ್ದೇಶಕರಾದ ಶ್ರೀ ಎಲ್ರಾಯ್ ಕಿರಣ್ ಕ್ರಾಸ್ಟೊ, ಶ್ರೀ ಜೋಸೆಫ್ ಅನಿಲ್ ಪತ್ರಾವೊ, ಶ್ರೀ ಜೆ.ಪಿ. ರೋಡ್ರಿಗಸ್, ಶ್ರೀ ರೋಶನ್ ಡಿಸೋಜಾ, ಶ್ರೀ ಹೆರಾಲ್ಡ್ ಜಾನ್ ಮೊಂತೆರೊ, ಶ್ರೀ ಡೇವಿಡ್ ಡಿಸೋಜಾ, ಶ್ರೀ ಮೆಲ್ವಿನ್ ವಾಸ್, ಶ್ರೀ ಸುಶಾಂತ್ ಸಲ್ಡಾನಾ, ಶ್ರೀ ಫೆಲಿಕ್ಸ್ ಡಿಕ್ರೂಜ್, ಶ್ರೀ ಸಿ.ಜಿ. ಪಿಂಟೊ, ಶ್ರೀಮತಿ ಶರ್ಮಿಳಾ ಮೆನೆಜಸ್, ಶ್ರೀ ಆಲ್ವಿನ್ ಪಿ. ಮೊಂತೆರೊ, ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಶಾಖಾ ನಿರ್ದೇಶಕಿ ಶ್ರೀಮತಿ ಐರೀನ್ ರೆಬೆಲ್ಲೊ ಸ್ವಾಗತಿಸಿ ಶ್ರೀ ಅಲೋಶಿಯಸ್ ಡಿಸೋಜಾ ನಿರೂಪಿಸಿದರು.

## ಶ್ರೀ ಬಸವೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿ,. ಬಸವನ ಬಾಗೇವಾಡಿ : ರೂ.1.01 ಕೋಟಿ ನಿವ್ವಳ ಲಾಭ

**ಬಸವನಬಾಗೇವಾಡಿ:** ಶ್ರೀ ಬಸವೇಶ್ವರ ಕೋ ಆಪರೇಟಿವ್ ಬ್ಯಾಂಕ್, ಬಸವನಬಾಗೇವಾಡಿ ಕಳೆದ 2024–25ನೇ ಹಣಕಾಸು ವರ್ಷದಲ್ಲಿ ಒಟ್ಟು ರೂ. 35132.37 ಲಕ್ಷ ವ್ಯವಹಾರ ಮಾಡಿ ರೂ 1.00 ಕೋಟಿ ಹೆಚ್ಚು ಆದಾಯ ಗಳಿಸಿದೆ ರೂ. 348.82 ಲಕ್ಷ ಶೇರು ಬಂಡವಾಳ, 410.13 ಲಕ್ಷ ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು ಸೇರಿ ಒಟ್ಟು 956.49 ಲಕ್ಷ ರೂ ಹೊಂದಿದ್ದು, 10338.19 ಲಕ್ಷ ಠೇವುಗಳು ಹೊಂದಿದ್ದು ದುಡಿಯುವ ಬಂಡವಾಳ ರೂ 12090.97 ಲಕ್ಷ ಇರುತ್ತದೆ. 2025ರ ವರ್ಷಾಂತ್ಯಕ್ಕೆ ಸಾಲಗಾರರಿಂದ ಬರತಕ್ಕ ಸಾಲ ಬಾಕಿ 6831.62 ಲಕ್ಷಗಳಿದೆ ಮತ್ತು ಜುಲೈ 1 ರಿಂದ ಬ್ಯಾಂಕಿನ ಎಲ್ಲ ಸದಸ್ಯ ಸಾಲಗಾರರಿಗೆ ಅಪಘಾತ ವಿಮಾ ರಕ್ಷಣೆ ಹಾಗೂ ಲಾಕರ ವಿಮಾ ರಕ್ಷಣೆ ಒದಗಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಲೋಕನಾಥ ನೇ ಅಗರವಾಲ ತಿಳಿಸಿದರು.




ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಬಸವರಾಜ ಈ ಗೊಳಸಂಗಿ ಅವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ 756.32 ಲಕ್ಷ ರೂ ಸಾಲ ವಿತರಿಸಿದೆ ಅನುತ್ಪಾದಕ ಸಾಲದ (ಎನ್‌ಪಿಎ) ಮೊತ್ತ 85.85 ಲಕ್ಷ ರೂ ಇದೆ ಎಂದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಿ.ಎಸ್. ತಳ್ಳೊಳ್ಳಿ ಇವರು ಮಾತನಾಡಿ ಆರ್. ಟಿ. ಜಿ.ಎಸ್. / ನೆಫ್ಟ್ ಸೌಲಭ್ಯ ಈಗಾಗಲೇ ಚಾಲ್ತಿಯಲ್ಲಿ ಇರುತ್ತದೆ ಮುಂದಿನ ದಿನಗಳಲ್ಲಿ ಎಟಿಎಮ್. ಯುಪಿಆಯ್ ಮೊಬೈಲ್ ಬ್ಯಾಂಕಿನ ಸೌಲಭ್ಯ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ನಿರ್ದೇಶಕರಾದ ಶ್ರೀ ಉಮೇಶ ಹಾರಿವಾಳ, ಶ್ರೀ ಶಂಕರಗೌಡ ಬಿರಾದಾರ, ಶ್ರೀ ಅನಿಲ ದುಂಬಾಳಿ, ಶ್ರೀ ಜಗದೀಶ ಕೋಟ್ರಶೆಟ್ಟಿ, ಶ್ರೀ ಸಿದ್ರಾಮಪ್ಪ ಕಿಣಗಿ, ಶ್ರೀ ಶ್ರೀಶೈಲ ಪತ್ತಾರ, ಶ್ರೀ ಶಿವಾನಂದ ಪಟ್ಟಣಶೆಟ್ಟಿ, ಶ್ರೀ ನೀಲಪ್ಪ ನಾಯಕ, ಶ್ರೀಮತಿ ಕಮಲಾ ತಿಪ್ಪನಗೌಡರ, ಶ್ರೀಮತಿ ಸುರೇಖಾ ಪಡಶೆಟ್ಟಿ, ಶ್ರೀ ಯಮನಪ್ಪಗೌಡ ಪಾಟೀಲ, ಶ್ರೀ ಭೀಮನಗೌಡ ಬಿರಾದಾರ, ಶ್ರೀ ರಾಜಶೇಖರ ಗುತ್ತರಗಿಮಠ ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

## ರಡ್ಡಿ ಸಹಕಾರ ಬ್ಯಾಂಕ್ ನಿಯಮಿತ, ಧಾರವಾಡ : 111ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ





**ಧಾರವಾಡ:** ದಿನಾಂಕ : 24-08-2025 ರಂದು ಜರುಗಿದ ರಡ್ಡಿ ಸಹಕಾರ ಬ್ಯಾಂಕಿನ ಸನ್ 2024-25ರ ಸಾಲಿನ 111ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಲ್. ಪಾಟೀಲ ಮತ್ತು ಬ್ಯಾಂಕಿನ ಹಿರಿಯ ನಿರ್ದೇಶಕರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ. ಪಾಟೀಲ ಇವರು ಭಾಗವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.

## ಡಾಲರ್ ಎದುರು ರೂಪಾಯಿ ಮೌಲ್ಯ ಇತಿಹಾಸದಲ್ಲೇ ದಾಖಲೆಯ ಕುಸಿತ ಮುಂದಿನ ದಿನಗಳಲ್ಲಿ ಇನ್ನಷ್ಟು ಕುಸಿತ ಕಾಣಲಿರುವ ಆತಂಕ

**ಮುಂಬೈ:** ಭಾರತೀಯ ರೂಪಾಯಿ ಮೌಲ್ಯ ದಾಖಲೆಯ ಕನಿಷ್ಠ ಮಟ್ಟವನ್ನು ತಲುಪಿದ್ದು, ಮೊದಲ ಬಾರಿಗೆ ಪ್ರತಿ ಡಾಲರ್‌ಗೆ 88 ರೂ.ಗಳ ಗಡಿಯನ್ನು ಕಳೆದ ಶುಕ್ರವಾರ ದಾಟಿದೆ. ಭಾರತೀಯ ಸರಕುಗಳ ಮೇಲಿನ ಅಮೆರಿಕದ ದಂಡನಾತ್ಮಕ ಸುಂಕಗಳು ದೇಶದ ಬೆಳವಣಿಗೆ ಮತ್ತು ಬಾಹ್ಯ ಹಣಕಾಸು ಮೇಲೆ ಪರಿಣಾಮ ಬೀರುತ್ತಿದೆ ಎಂದು ಹೂಡಿಕೆದಾರರು ಹೇಳಿದ್ದಾರೆ.

ಅಮೆರಿಕ ಈ ವಾರ ಭಾರತೀಯ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ.25 ಸುಂಕವನ್ನು ವಿಧಿಸಿದ್ದು, ದಕ್ಷಿಣ ಏಷ್ಯಾದ ರಾಷ್ಟ್ರ ಎದುರಿಸುತ್ತಿರುವ ಒಟ್ಟು ಸುಂಕಗಳನ್ನು ಶೇ. 50ಕ್ಕೆ ದ್ವಿಗುಣಗೊಳಿಸಿದೆ.

ಈ ಬೆಳವಣಿಗೆ ಬೆನ್ನಲ್ಲೇ ಯುಎಸ್ ಡಾಲರ್ ವಿರುದ್ಧ ರೂಪಾಯಿ ಮೌಲ್ಯ 88.29ಕ್ಕೆ ಇಳಿದು, ಫೆಬ್ರವರಿಯಲ್ಲಿ ಅದರ ಹಿಂದಿನ ಕನಿಷ್ಠ ರೂ.87.95ನ್ನು ದಾಟಿದೆ ಎಂದು ತಿಳಿಸಿದ್ದಾರೆ. 2025ರಲ್ಲಿ ರೂಪಾಯಿ ಮೌಲ್ಯ ಶೇ. 3ರಷ್ಟು ಕುಸಿದಿದ್ದು, ರೂಪಾಯಿ ಈ ವರ್ಷ ಏಷ್ಯಾದಲ್ಲಿ ಅತ್ಯಂತ ಕಳಪೆ ಕರೆನ್ಸಿಯಾಗಿದೆ. ಶುಕ್ರವಾರ ಚೀನಾದ ಯುವಾನ್ ವಿರುದ್ಧ ಭಾರತೀಯ ಕರೆನ್ಸಿ ಕೂಡ ದಾಖಲೆಯ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ರೂಪಾಯಿ 87.60ಕ್ಕೆ ತಲುಪಿದ ನಂತರ, ಆಮದುದಾರರಿಂದ ಸಾಕಷ್ಟು ಬೇಡಿಕೆ ಬಂದಿದೆ. ಅದನ್ನು ತಡೆಹಿಡಿಯಲಾಗಲಿಲ್ಲ. ಅವರೆಲ್ಲರೂ ಆರ್‌ಬಿಐ ಮಧ್ಯಪ್ರವೇಶಿಸುತ್ತದೆ ಎಂದು ನಿರೀಕ್ಷಿಸಿದ್ದರು, ಆದರೆ ಆರ್‌ಬಿಐ ಮಧ್ಯಪ್ರವೇಶಿಸಲು ಹಿಂದೇಟು ಹಾಕಿತು. ನಂತರ ರೂಪಾಯಿ 88 ದಾಟಿ ನಂತರ, ಮುಂದಿನ ದಿನಗಳಲ್ಲಿ ರೂಪಾಯಿ ಮೌಲ್ಯ ಇನ್ನಷ್ಟು ಕುಸಿತ ಕಾಣಲಿದೆ ಎಂದು ವಿದೇಶಿ ವಿನಿಮಯ ಸಂಶೋಧನಾ ಮುಖ್ಯಸ್ಥರು ಹೇಳಿದ್ದಾರೆ.

**ರೂ. 89 ಮುಂದಿನ ಪ್ರಮುಖ ಹಂತವಾಗಿದೆ :** ಯುಎಸ್ ಸುಂಕಗಳು ಒಂದು ವರ್ಷ ಹಾಗೆಯೇ ಮುಂದುವರಿದರೆ ಭಾರತದ ಜಿಡಿಪಿ ಬೆಳವಣಿಗೆಯಿಂದ 60-80 ಬೇಸಿಸ್ ಪಾಯಿಂಟ್‌ಗಳನ್ನು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಇದು ಈಗಾಗಲೇ ನಿಧಾನಗತಿಯಲ್ಲಿರುವ ಆರ್ಥಿಕತೆಯ ಮೇಲೆ ಒತ್ತಡವನ್ನು ಹೆಚ್ಚಿಸುತ್ತದೆ. ಮಾರ್ಚ್ 31 ರಂದು ಕೊನೆಗೊಳ್ಳುವ ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಕೇಂದ್ರ ಬ್ಯಾಂಕ್ ಪ್ರಸ್ತುತ ಆರ್ಥಿಕತೆಯು ಶೇ.6.5 ರಷ್ಟು ಬೆಳೆಯುತ್ತದೆ ಎಂದು ನಿರೀಕ್ಷಿಸುತ್ತಿದೆ.

ಅಮೆರಿಕಕ್ಕೆ ಭಾರತದ ರಫ್ತುಗಳು ಜಿಡಿಪಿಯ ಶೇ.2.2 ರಷ್ಟಿದೆ ಆದರೆ ಜವಳಿ ಮತ್ತು ಆಭರಣಗಳಂತಹ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕ ವರ್ಗ ಈ ಕುಸಿತದಿಂದ ಉದ್ಯೋಗ ನಷ್ಟಕ್ಕೆ ಕಾರಣವಾಗಬಹುದು ಮತ್ತು ಆರ್ಥಿಕ ಪರಿಣಾಮವನ್ನು ಇನ್ನಷ್ಟು ಹದಗೆಡಿಸಬಹುದು ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಕೆ ನೀಡಿದ್ದಾರೆ.

ವಿದೇಶಿ ಬಂಡವಾಳ ಹರಿವು ದುರ್ಬಲವಾಗಿರುವ ಸಮಯದಲ್ಲಿ, ದೇಶದ ಪಾವತಿ ಸಮತೋಲನವನ್ನು ಇನ್ನಷ್ಟು ಹದಗೆಡಿಸುವ ಸಮಯದಲ್ಲಿ ಸುಂಕಗಳು ಭಾರತದ ವ್ಯಾಪಾರ ಕೊರತೆಯನ್ನು ಹೆಚ್ಚಿಸಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ವಿದೇಶಿ ಬಂಡವಾಳ ಹೂಡಿಕೆದಾರರು ಈ ವರ್ಷ ಇಲ್ಲಿಯವರೆಗೆ ಭಾರತದ ಸಾಲ ಮತ್ತು ಷೇರುಗಳಲ್ಲಿ 9.7 ಡಾಲರ್‌ನಷ್ಟು ಮಾರಾಟ ಮಾಡಿದ್ದಾರೆ. ರಫ್ತುಗಳ ಮೇಲಿನ ಸುಂಕದ ಕಾರಣದಿಂದಾಗಿ ಉಂಟಾಗುವ ಆರ್ಥಿಕ ಬೆಳವಣಿಗೆಯಲ್ಲಿನ ವಿಳಂಬ ಭಾರತದ ವ್ಯಾಪಾರ ಸಮತೋಲನಕ್ಕೆ ಸ್ವಲ್ಪ ಹೆಚ್ಚಿನ ಒತ್ತಡವನ್ನು ಉಂಟುಮಾಡಬಲ್ಲದು ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.



## ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ : 105ನೇ ಸರ್ವ ಸದಸ್ಯರ ಮಹಾಸಭೆ

ದಿನಾಂಕ : 31.08.2025ರಂದು ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕಿನ 105ನೇ ಸರ್ವಸದಸ್ಯರ ಮಹಾಸಭೆಯು ಯಶವಂತಪುರದ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎಂ. ಸುರೇಶ್‌ರವರ ಅಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

## ಹೊನ್ನಾವರ ಅರ್ಬನ್ ಬ್ಯಾಂಕ್ : 106ನೇ ವಾರ್ಷಿಕ ಮಹಾಸಭೆ

**ಹೊನ್ನಾವರ** : ದಿನಾಂಕ: 24-08-2025 ರಂದು ಹೊನ್ನಾವರ ನಗರ ಸಹಕಾರಿ ಬ್ಯಾಂಕಿನ 106ನೇ ವಾರ್ಷಿಕ ಸರ್ವಸಾಧಾರಣ ಸಭೆಯು ನ್ಯೂ ಇಂಗ್ಲೀಷ ಸ್ಕೂಲ್, ಹೊನ್ನಾವರ ಆವರಣದಲ್ಲಿ ಜರುಗಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

1919ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿರುವ ಪ್ರತಿಷ್ಠಿತ ದಿ ಹೊನ್ನಾವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಹೊನ್ನಾವರ 2024-25ನೇ ಸಾಲಿನಲ್ಲಿ ರೂ.1 ಕೋಟಿ 37 ಲಕ್ಷ ನಿರ್ವಹಣಾ ಲಾಭ ಗಳಿಸಿದ್ದು, ಸರಕಾರಕ್ಕೆ ಆದಾಯ ತೆರಿಗೆ ಪಾವತಿಸುವ ನಂತರ ರೂ.1 ಕೋಟಿ 88 ಸಾವಿರ ನಿಕ್ಕಿ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಶ್ರೀ ರಾಘವ ವಿಷ್ಣು ಬಾಳೇರಿಯವರು ವಾರ್ಷಿಕ ಸರ್ವಸದಸ್ಯರ ಸಾಧಾರಣ ಸಭೆಯಲ್ಲಿ ತಿಳಿಸಿದರು.

ಬ್ಯಾಂಕಿನ ಠೇವು ರೂ.242.23 ಕೋಟಿ ಸಾಲ-ಮುಂಗಡಗಳು ರೂ.157.31 ಕೋಟಿಗಳಿಗೆ ತಲುಪಿವೆ. ಶೇರು ಭಂಡವಾಳ ಮತ್ತು ಸ್ವಂತ ನಿಧಿಗಳು ರೂ. 25.65 ಕೋಟಿ, ಒಟ್ಟು ದುಡಿಯುವ ಭಂಡವಾಳ ರೂ.277.87 ಕೋಟಿಗಳಾಗಿರುತ್ತದೆ.




ಬ್ಯಾಂಕು ಸಾಲ ಮತ್ತು ಮುಂಗಡಗಳನ್ನು ನೀಡಲು ಹೆಚ್ಚಿನ ಸಂಪನ್ಮೂಲವನ್ನು ಹೊಂದಿದ್ದು, ಅತ್ಯಂತ ಸ್ಪರ್ಧಾತ್ಮಕ ದರಗಳಲ್ಲಿ ಬ್ಯಾಂಕಿನ ಶರತ್ತುಗಳಿಗೆ ಒಳಪಟ್ಟು ಪ್ರತಿ ಗ್ರಾಂ ಬಂಗಾರಕ್ಕೆ ಗರಿಷ್ಠ ರೂ. 6000/- ಬಂಗಾರ ದಾಗಿನೆ ಸಾಲವನ್ನು ಶೇ. 8.50 ರಿಂದ ಶೇ.11.50 ರವರೆಗಿನ ಬಡ್ಡಿದರಗಳಲ್ಲಿ ನೀಡುತ್ತಿದೆ. ಇದರ ಹೊರತಾಗಿ ಬ್ಯಾಂಕಿನ ಶರತ್ತುಗಳಿಗೆ ಒಳಪಟ್ಟು ವಿಶೇಷ ಸಾಲ ಯೋಜನೆಗಳಾದ ಕಾರು ಸಾಲ 8.25% ಹಾಗೂ ವ್ಯವಹಾರ ಉದ್ದಿಮೆಗಳಿಗೆ 9.50%ರ ಬಡ್ಡಿದರಗಳಲ್ಲಿ ಸಾಲವನ್ನು ನೀಡಲಾಗುತ್ತಿವೆ.

ಬ್ಯಾಂಕು ಸಮಾಜಮುಖಿಯಾಗಿ ತನ್ನ ಕಾರ್ಯನಿರ್ವಹಿಸುತ್ತಿದೆ. ಪ್ರತಿ ವರ್ಷ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಶಿಕ್ಷಣ, ಕ್ರೀಡೆ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ ಜಿಲ್ಲೆಯ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಪರಿಪಾಠ ಹಾಕಿಕೊಂಡಿದೆ. ಬ್ಯಾಂಕು ತನ್ನ ಸಂಸ್ಥಾಪಕರಾದ ದಿ. ಎಮ್.ಎ. ಕಿಣಿ ಹಾಗೂ ದಿ. ಎಲ್.ಕೆ. ಶ್ಯಾನಭಾಗ ಶ್ರೋಫ್‌ರವರ ಸ್ಮರಣಾರ್ಥ ನಿರ್ಮಿಸಿರುವ ಸಭಾಭವನವನ್ನು ಸಹಕಾರಿ ವಲಯದ ತರಬೇತಿ ಕಾರ್ಯಕ್ರಮಗಳಿಗೆ ಉಚಿತವಾಗಿ ನೀಡುತ್ತಿದೆ. ಜನತೆಗೆ ಶುದ್ಧ ಕುಡಿಯುವ ನೀರನ್ನು ಪೂರೈಸಿ ಜನತೆಯ ಅಗತ್ಯಕ್ಕೆ ಸ್ಪಂದಿಸಿ ತನ್ನ ಸಾಮಾಜಿಕ ಬದ್ಧತೆಯನ್ನು ನಿರ್ವಹಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಸಿಬ್ಬಂದಿಯು ದಿನಾಂಕ : 28.02.2022ರಂದು ವಯೋನಿವೃತ್ತಿ ಹೊಂದಿದ್ದು ಈಗ ಅವರಿಗೆ ಅದೇ ಬ್ಯಾಂಕಿನಲ್ಲಿ ಸದಸ್ಯತ್ವ ನೀಡಬಹುದೇ ಎಂಬುದನ್ನು ಖಚಿತಪಡಿಸಬೇಕೆಂದು ತಮ್ಮಲ್ಲಿ ಕೋರುತ್ತೇವೆ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 17(1) (ಎಫ್) ರೀತ್ಯ ನಿಮ್ಮಲ್ಲಿ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ ಮಾತ್ರ ನಿಮ್ಮ ಬ್ಯಾಂಕಿನಲ್ಲಿ ಸದಸ್ಯತ್ವ ಪಡೆಯುವಂತಿಲ್ಲ. ಆದ್ದರಿಂದ ನಿಮ್ಮ ನಿವೃತ್ತ ಉದ್ಯೋಗಿ ನಿಮ್ಮ ಬ್ಯಾಂಕಿನಲ್ಲಿ ಸದಸ್ಯರಾಗಲು ಯಾವುದೇ ನಿರ್ಬಂಧವಿಲ್ಲ.

**02. ನಮ್ಮ ಬ್ಯಾಂಕು ಹೊಸತಾಗಿ ಗ್ರಾಮೀಣ ಪ್ರದೇಶದಲ್ಲಿ ಶಾಖೆಯನ್ನು ತೆರೆದಿದೆ. ಗ್ರಾಮೀಣ ಗ್ರಾಹಕರು ಮತ್ತು ರೈತ ಬಂಧುಗಳಿಗೆ ಅನುಕೂಲವಾಗಲು ಮತ್ತು ಹೊಸ ಶಾಖೆಯಲ್ಲಿ ಸಾಲದ ಪ್ರಮಾಣವನ್ನು ಹೆಚ್ಚಿಸಲು ಗ್ರಾಮೀಣ ಶಾಖೆಯಲ್ಲಿ ಚಿನ್ನದ ಸಾಲಕ್ಕೆ ಕಡಿಮೆ ಬಡ್ಡಿದರವನ್ನು ವಿಧಿಸಲು ಯೋಚಿಸುತ್ತಿದ್ದೇವೆ. ಈ ರೀತಿ ಗ್ರಾಮಾಂತರ ಮತ್ತು ಇತರೆ ಪ್ರದೇಶಗಳಲ್ಲಿ ಸಾಲದ ಮೇಲೆ ಬೇರೆ ಬೇರೆ ಬಡ್ಡಿದರ ವಿಧಿಸಲು ರಿಜರ್ವ್ ಬ್ಯಾಂಕಿನ ಪರವಾನಗಿ ಇದೆಯೇ?**

**ಉತ್ತರ :** ರಿಜರ್ವ್ ಬ್ಯಾಂಕಿನ ಮಾರ್ಗಸೂಚಿ ಪ್ರಕಾರ ಗ್ರಾಮಾಂತರ ಮತ್ತು ಇತರೇ ಶಾಖೆಗಳಲ್ಲಿ ಬೇರೆ ಬೇರೆ ಬಡ್ಡಿದರವನ್ನು ವಿಧಿಸಲು ಅವಕಾಶವಿಲ್ಲ.

## ಸೆಪ್ಟೆಂಬರ್ 1 ರಿಂದ ಬೆಳ್ಳಿ ಆಭರಣಗಳಿಗೂ ಹಾಲ್‌ಮಾರ್ಕ್ ಕಡ್ಡಾಯ



**ನವದೆಹಲಿ:** ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಚಿನ್ನಕ್ಕೆ ವಿಶೇಷ ಸ್ಥಾನವಿದೆ. ಚಿನ್ನದ ನಂತರ, ಬೆಳ್ಳಿಯನ್ನು ಅಮೂಲ್ಯ ಲೋಹ ಎಂದು ಪರಿಗಣಿಸಲಾಗಿದೆ. ಚಿನ್ನದ ಜೊತೆಗೆ ಬೆಳ್ಳಿಯ ಆಭರಣಗಳನ್ನು ಸಹ ಧರಿಸುತ್ತಾರೆ. ಪ್ರಸ್ತುತ ಚಿನ್ನದ ಬೆಲೆಗಳು ದಾಖಲೆ ಮಟ್ಟದಲ್ಲಿವೆ. ಇದರಿಂದ ಅನೇಕರು ಬೆಳ್ಳಿ ಖರೀದಿಗೆ ಮುಂದಾಗಿದ್ದು, ಬೆಳ್ಳಿಯ ಆಭರಣಗಳಿಗೆ ಚಿನ್ನದ ಲೇಪನ ಮಾಡಿಸುತ್ತಿದ್ದಾರೆ. ಇದರಿಂದ ಬೆಳ್ಳಿಯ ಬೇಡಿಕೆಯೂ ಹೆಚ್ಚಾಗಿದ್ದು, ಬೆಲೆಗಳು ಏರುತ್ತಿವೆ. ಇದೀಗ 2025ರ ಸೆಪ್ಟೆಂಬರ್ 1 ರಿಂದ ಹೊಸ ನಿಯಮಗಳು ಜಾರಿಗೆ ಬಂದಿವೆ. ಬೆಳ್ಳಿ ಆಭರಣಗಳಿಗೂ ಹಾಲ್‌ಮಾರ್ಕ್ ಕಡ್ಡಾಯವಾಗಲಿದೆ.

ಭಾರತೀಯ ಗುಣಮಟ್ಟ ಬ್ಯೂರೋ (BIS) ಪ್ರಕಾರ, ಬೆಳ್ಳಿ ಆಭರಣಗಳಿಗೆ 900, 800, 835, 925, 970, 990 ಎಂಬ ಆರು ರೀತಿಯ ಶುದ್ಧತೆಯ ಮಟ್ಟವನ್ನು ನಿರ್ಧರಿಸಲಾಗುತ್ತದೆ. ಬೆಳ್ಳಿ ಆಭರಣಗಳ ಶುದ್ಧತೆಗೆ ಅನುಗುಣವಾಗಿ, 6 ಅಂಕಿಯ ಹಾಲ್‌ಮಾರ್ಕ್ ಯುನಿಕ್ ಐಡೆಂಟಿಫಿಕೇಶನ್ ನಂಬರ್ (HUID) ನೀಡಲಾಗುತ್ತದೆ. ಈ ಹಾಲ್‌ಮಾರ್ಕ್ ಅನ್ನು ಪ್ರತಿ ಆಭರಣದ ಮೇಲೆ ಮುದ್ರಿಸಲಾಗುತ್ತದೆ. ಈ ಹೊಸ ವ್ಯವಸ್ಥೆಯು ಪ್ರಸ್ತುತ ಜಾರಿಯಲ್ಲಿರುವ ಹಾಲ್‌ಮಾರ್ಕಿಂಗ್ ವ್ಯವಸ್ಥೆಯ ಸ್ಥಾನವನ್ನು ಪಡೆಯಲಿದೆ.

ಕೇಂದ್ರ ಸರ್ಕಾರವು 2021ರಲ್ಲಿ ಚಿನ್ನದ ಹಾಲ್‌ಮಾರ್ಕಿಂಗ್ ಅನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿತ್ತು. ಹಾಲ್‌ಮಾರ್ಕಿಂಗ್ ಎಂದರೆ ಅಮೂಲ್ಯ ಲೋಹಗಳ ಆಭರಣಗಳಲ್ಲಿ ಲೋಹದ ಶುದ್ಧತೆಯನ್ನು ಸೂಚಿಸುತ್ತದೆ. ಇದು ಶುದ್ಧತೆಯನ್ನು ಅಧಿಕೃತವಾಗಿ ನೋಂದಾಯಿಸುವ ಒಂದು ವಿಶೇಷ ಪ್ರಕ್ರಿಯೆ. ಭಾರತದಲ್ಲಿ, ಬಿಐಎಸ್ ಹಾಲ್‌ಮಾರ್ಕಿಂಗ್ ಆಭರಣಗಳು ಕಾನೂನುಬದ್ಧ ಶುದ್ಧತೆಯ ಮಾನದಂಡಗಳನ್ನು ಅನುಸರಿಸುತ್ತವೆಯೇ ಎಂದು ಖಚಿತಪಡಿಸುತ್ತದೆ.

2025ರ ಸೆಪ್ಟೆಂಬರ್ 1 ರಿಂದ, ಬೆಳ್ಳಿ ಆಭರಣಗಳಿಗೆ ಹಾಲ್‌ಮಾರ್ಕಿಂಗ್ ಸ್ವಯಂಪ್ರೇರಿತವಾಗಲಿದೆ. ಇದು ಚಿನ್ನಕ್ಕೆ ಜಾರಿಗೆ ತಂದಿರುವಂತೆಯೇ ಇರುತ್ತದೆ. ಪ್ರತಿ ಆಭರಣದ ಮೇಲೆ 6 ಅಂಕಿಯ HUID ಸಂಖ್ಯೆಯನ್ನು ಮುದ್ರಿಸಲಾಗುತ್ತದೆ. ಅದರ ಮೂಲಕ ಆ ಆಭರಣದ ಶುದ್ಧತೆಯನ್ನು ತಿಳಿದುಕೊಳ್ಳಬಹುದು. ಖರೀದಿದಾರರು ಬಿಐಎಸ್ ಕೇರ್ ಅಪ್ಲಿಕೇಶನ್‌ನಲ್ಲಿ ವೆರಿಫೈ HUID ವೈಶಿಷ್ಟ್ಯದ ಮೂಲಕ ಆಭರಣಗಳ ಶುದ್ಧತೆಯನ್ನು ಪರಿಶೀಲಿಸಬಹುದು. ಇದರಿಂದ ಹಾಲ್‌ಮಾರ್ಕ್ ಇಲ್ಲದ, ನಕಲಿ, ಕಲಬೆರಕೆ ಉತ್ಪನ್ನಗಳಿಂದ ರಕ್ಷಣೆ ಪಡೆಯಬಹುದು. ಚಿನ್ನದ ಆಭರಣಗಳಿಗೆ 999, 970 ಎಂದು ಶುದ್ಧತೆಯನ್ನು ನಿರ್ಧರಿಸಲಾಗುತ್ತದೆ.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು:** ಬೆಂಗಳೂರಿನ ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಬಿ.ಎಂ. ಸರಸ್ವತಿ ರವರು ಮಹಾಮಂಡಳದ ಅಧೀಕ್ಷಕ (ಪ್ರ) ಶ್ರೀ ಹನುಮಂತಕುಮಾರ್ ಆರ್.ರವರಿಗೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ಜಿ.ಎನ್. ಸೌಮ್ಯ ರವರು ಉಪಸ್ಥಿತರಿದ್ದರು.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬೆಳಗಾವಿಯ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು, ಪ್ರತೀ ವರ್ಷದಂತೆ ಈ ವರ್ಷವೂ ತಮ್ಮ ಮನೆ ಹಾಗೂ ಕಚೇರಿಯಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಸಾಮಾಜಿಕ ಮತ್ತು ಕೋಮು ಸೌಹಾರ್ದತೆಯೊಂದಿಗೆ ಭಾವೈಕ್ಯತೆಯ ಸಂದೇಶ ಸಾರಿದ್ದಾರೆ.
- ಬೆಂಗಳೂರಿನಿಂದ ತುಮಕೂರಿಗೆ 2 ಹಂತದ ಬೈಪಾಸ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ ಅದರ ಭೂಮಿ ಪೂಜೆಯನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಶೀಘ್ರದಲ್ಲೇ ನೆರವೇರಿಸಲಿದ್ದಾರೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.
- ಭಾರತೀಯ ಅಂಚೆ ವ್ಯವಸ್ಥೆಯಲ್ಲಿ ಬಹುಮುಖ್ಯ ಸ್ಥಾನ ಪಡೆದಿದ್ದ ನೋಂದಾಯಿತ ಅಂಚೆ-ರಿಜಿಸ್ಟರ್ಡ್ ಪೋಸ್ಟ್ ಸೇವೆ ಆಗಸ್ಟ್ 31ರಂದು ನೇಪಥ್ಯಕ್ಕೆ ಸರಿಯಲಿದ್ದು, ತ್ವರಿತ ಅಂಚೆಯಲ್ಲಿ ಅದು ವಿಲೀನಗೊಳ್ಳಲಿದೆ. ವಾರನ್ ಹೇಸ್ಟಿಂಗ್ಸ್ ಅವರು 1794ರ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮದ್ರಾಸ್ ಮುಂಬೈ ಹಾಗೂ ಕಲ್ಕತ್ತಾಗಳಲ್ಲಿ ಕಂಪನಿ ಉಪಯೋಗಕ್ಕಾಗಿ ಅಂಚೆ ಕಚೇರಿಗಳನ್ನು ಆರಂಭಿಸಿದರು. 171 ವರ್ಷಗಳಷ್ಟು ಸುದೀರ್ಘ ಕಾಲದ ಸೇವೆಯ ನಂತರ ಈಗ ಅಂತ್ಯಗೊಂಡಿದೆ.
- ಉಡುಪಿ ಜಿಲ್ಲೆಯ ಆರೂರು ಗ್ರಾಮದ ಮುಂಡ್ಕಿನ ಜಡ್ಡುವಿನ ದೀಕ್ಷಾ ವಿ. ಅವರು ನಿರಂತರ 216 ಗಂಟೆ ಭರತನಾಟ್ಯ ಪ್ರದರ್ಶನ ನೀಡುವ ಮೂಲಕ ಬ್ರಹ್ಮಾವರ ತಾಲ್ಲೂಕಿನ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಬರೆದಿದ್ದಾರೆ. ಈ ಮುನ್ನ 170 ಗಂಟೆಗಳ ನಿರಂತರ ಭರತನಾಟ್ಯ ಪ್ರದರ್ಶನ ಪೂರೈಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದ್ದ ಮಂಗಳೂರಿನ ರೆಮೋನಾ ಇವೆಟ್ ಪಿರೇರಾ ಅವರ ದಾಖಲೆಯನ್ನು ದೀಕ್ಷಾ ಅವರು ಮುರಿದಿದ್ದಾರೆ.
- ಮನುಷ್ಯನ ಬದುಕಿನಲ್ಲಿ ಹುಟ್ಟಿನಿಂದ ಸಾಯುವವರೆಗೂ ಒಂದು ಭಾಗವೇ ಆಗಿದ್ದ ಬಿದಿರು, ಈಗ ಕಾಡಿನ ಜಿಲ್ಲೆ ಎಂದೇ ಪ್ರಸಿದ್ಧಿ ಪಡೆದ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತೆ ಚಿಗುರುತ್ತಿದೆ. ಉತ್ತರ ಕನ್ನಡದ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಮಹಿಳೆಯರಿಗೆ ಮತ್ತು ಆಸಕ್ತ ಯುವಕರಿಗೆ ಸ್ವ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಪ್ರತಿ ವರ್ಷ ಬಿದಿರು ಕಲಾಕೃತಿ ಸಿದ್ಧಪಡಿಸುವ ತರಬೇತಿ ನೀಡಲಾಗುತ್ತಿದ್ದು ಇದರ ಉಪಯೋಗವನ್ನು ಈಗಾಗಲೇ ಹಲವರು ಪಡೆದುಕೊಂಡಿದ್ದಾರೆ.

## ಓದುಗರ ಅನಿಸಿಕೆ...




**ಜನರ ಸಂಕಷ್ಟ ತಿಳಿಯಿತೆ? :** ಮಧ್ಯಮ ಮತ್ತು ಕಡಿಮೆ ಆದಾಯ ಹೊಂದಿರುವ ಜನರಿಗೆ ಸಮಾಧಾನ ನೀಡುವ ನಿಟ್ಟಿನಲ್ಲಿ ಸರಕು ಮತ್ತು ಸೇವಾ ತೆರಿಗೆಯಲ್ಲಿ ಶೇ.12 ಮತ್ತು ಶೇ.28ರಷ್ಟು ಸ್ಲ್ಯಾಬ್‌ಗಳನ್ನು ರದ್ದುಗೊಳಿಸಿ, ಶೇ.5 ಮತ್ತು ಶೇ. 18ಕ್ಕೆ ಇಳಿಕೆ ಮಾಡಲಿದ್ದು, ಹಲವು ಅಗತ್ಯ ವಸ್ತುಗಳ ಬೆಲೆಯಲ್ಲಿ ಇಳಿಕೆಯಾಗಲಿದೆ ಎಂದು ವರದಿಯಾಗಿದೆ. ಇಷ್ಟು ದಿನಗಳ ನಂತರ ಕೇಂದ್ರಕ್ಕೆ ಜನರ ಸಂಕಷ್ಟ ತಿಳಿಯಿತೆ?

**▸▸ ವ್ಹಿ. ಮಹಾಂತೇಶ ಶೀಲವಂತರ, ಬೆಳಗಾವಿ**

**ನಮಗೆ ಉಪಯುಕ್ತವಾಗಿದೆ :** ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಿತ್ಯವೂ ಹೊಸ ಹೊಸ ಅಂಶಗಳನ್ನು ಕಲಿಯುತ್ತಲೇ ಸಾಗಬೇಕಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರಿಗೆ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ, ಅಧಿಕಾರಿ-ಸಿಬ್ಬಂದಿಗಳಿಗೆ ಆಗಿಂದ್ದಾಗ್ಗೆ ವಿಚಾರ ಸಂಕಿರಣವನ್ನು, ಶಿಕ್ಷಣ-ತರಬೇತಿಯನ್ನು ನೀಡುತ್ತಿರುವುದು ನಮಗೆ ಉಪಯುಕ್ತವಾಗಿದೆ.

**▸▸ ಸುನಿತಾ ತಳವಾಡಿ ಎನ್., ಹಾವೇರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.